





# ಹಾವುಗಳನ್ನು ಬದುಕಲು ಬಿಡಿ

**ಹಾವುಗಳು ಕುರಿತು ಸಾಕಷ್ಟು ಮೂಢನಂಬಿಕೆಗಳಿವೆ. ಅದಕ್ಕೆ ಮುಖ್ಯ ಕಾರಣ ಅವುಗಳ ಬಗ್ಗೆ ನಮಗಿರುವ ಭಯ. ಈ ಭಯವೂ ಅಜ್ಞಾನದಿಂದ ಹುಟ್ಟಿದೆ.**

ಚಿತ್ರ– ಬರಹ: **ಆರ್.ಕೆ. ಮಧು**

ಹಾವುಗಳ ಹರಿದಾಡುವ ಹಾವ–ಭಾವ ಕಂಡರೇ ಭಯ ಬೀಳುವವರು ನಾವು. ನಮಗಿಂತ ಹೆಚ್ಚು ಬೆಚ್ಚಿ ಬೀಳುವ ಸರದಿ ಈಗ ಹಾವಿಗಳದ್ದು! ಹಾವು ಕಂಡೊಡನೆ ಹೊಡೆದು ಕೊಲ್ಲುವ ಮನುಜರ ಸಂಖ್ಯೆ ಹೆಚ್ಚಾಗಿದೆ. ಹಾವು ಕಂಡೊಡನೆ ಅದನ್ನು ಕೊಲ್ಲುವ ನಮ್ಮ ಮನೋಧರ್ಮ, ಇಂದು ಅವುಗಳನ್ನು ವಿನಾಶದ ಅಂಚಿಗೆ ತಂದು ನಿಲ್ಲಿಸಿದೆ.

ಹಾವಿನ ನೈಜ ಪರಿಸರದ ಅವಸಾನ, ಹೆಚ್ಚುತ್ತಿರುವ ನಗರೀಕರಣ, ಹಾವುಗಳ ಬಗೆಗಿನ ಮನುಷ್ಯರ ಅರಿವಿನ ಕೊರತೆ ಅಥವಾ ಅಪನಂಬಿಕೆಗಳಿಂದ ಇಂದು ಹಾವುಗಳು ಹೆಡೆ ಎತ್ತದ ಸ್ಥಿತಿ ನಿರ್ಮಾಣವಾಗಿದೆ. ವೈವಿಧ್ಯಮಯ ತಳಿಯ ಹಾವುಗಳು ನಿರ್ನಾಮವಾಗುತ್ತಿವೆ. ಹಾವುಗಳು ಬುಸುಗುಡುವುದನ್ನು ಮರೆತು ನಿಟ್ಟುಸಿರು ಬಿಡುವಂತಾಗಿದೆ.

ಜುಲೈ 16ರಂದು ವಿಶ್ವ ಹಾವಿನ ದಿನಾಚರಣೆ. ಈ ಸಂದರ್ಭದಲ್ಲಿ ಜನರಲ್ಲಿ ಹಾವುಗಳ ಬಗ್ಗೆ ಹೆಚ್ಚಿನ ಅರಿವು ಮೂಡಿಸುವ ಕೆಲಸ ಆಗಬೇಕಿದೆ. ಹಾವುಗಳಿಗೂ ಬದುಕಲು ಬಿಡಿ ಎಂಬ ಆಂದೋಲನದ ಜತೆಗೆ ಅವುಗಳ ಬಗೆಗಿನ ನಮ್ಮ ಭಯಗಳನ್ನೂ ತೊಡೆದುಕೊಳ್ಳುವ ಕೆಲಸ ಆಗಬೇಕಿದೆ.

ವಿಶ್ವದಲ್ಲಿ ಇಂದು ಸುಮಾರು 2900 ಜಾತಿಯ ಹಾವುಗಳಿವೆ ಎನ್ನುವುದು ಒಂದು ಅಂದಾಜು. ಅಂಟಾರ್ಕಟಿಕಾ ಬಿಟ್ಟು ಪ್ರಪಂಚದ ಎಲ್ಲೆಡೆ ಹಾವುಗಳು ನೆಲೆ ಕಂಡುಕೊಂಡಿವೆ. ಆದರೆ ಎಲ್ಲ ದೇಶಗಳಲ್ಲೂ ಇಂದು ಅವುಗಳ ನೆಲೆ ಕುಸಿಯುತ್ತಿದೆ. ಭಾರತದಲ್ಲಿ ಸುಮಾರು 270 ಜಾತಿಯ ಹಾವುಗಳಿದ್ದು ಅವುಗಳಲ್ಲಿ ಕೇವಲ 5 ಜಾತಿಯ ಹಾವುಗಳು ಮಾತ್ರ ವಿಷಕಾರಿ. ಉಳಿದ ಎಲ್ಲ ಹಾವುಗಳೂ ವಿಷಕಾರಿ ಅಲ್ಲ. ಈ ನಿಟ್ಟಿನಲ್ಲಿ ನಮ್ಮ ಜನರ ಅಜ್ಞಾನವನ್ನು ದೂರ ಮಾಡಲು ವ್ಯಾಪಕ ಪ್ರಚಾರಾಂದೋಲನ ನಡೆಯಬೇಕಿದೆ.

ನಮ್ಮಲ್ಲಿ ಕಂಡುಬರುವ ನಾಗರಹಾವು, ಕಾಳಿಂಗ ಸರ್ಪ, ಕಟ್ಟುಹಾವು, ಮಂಡಲದ ಹಾವು, ಹಾಗೂ ಸಮುದ್ರದಲ್ಲಿ ಇರುವ ನೀರು ಹಾವು ಮಾತ್ರ ವಿಷಕಾರಿ ಹಾವುಗಳು. ಮಿಕ್ಕೆಲ್ಲವೂ ನಿರಪಾಯಕಾರಿ; ಮಾತ್ರವಲ್ಲ ಮಾನವನಿಗೆ ವಿವಿಧ ಬಗೆಯಲ್ಲಿ ಸಹಕಾರಿ ಮತ್ತು ಉಪಕಾರಿಯೂ ಹೌದು. ಆದರೆ ಹಾವುಗಳು ಹರಿದಾಡುವ ವೇಗ ಹಾಗೂ ಅವುಗಳನ್ನು ಗುರುತಿಸುವಲ್ಲಿ ಮನುಷ್ಯನಿಗೆ ತಿಳುವಳಿಕೆಯ ಕೊರತೆ ಇರುವುದರಿಂದ ಹಾವುಗಳ ಕುರಿತು ತಪ್ಪು ತಿಳುವಳಿಕೆ ಮತ್ತು ಭಯ ಹೆಚ್ಚಾಗಿದೆ. ಹಾವುಗಳನ್ನು ಇಂತಹದ್ದೇ ಎಂದು ಗುರುತಿಸುವಲ್ಲಿ ನಮ್ಮ ಈಗಿನ ಜನಾಂಗವಂತೂ ತೀರಾ ಹಿಂದುಳಿದಿದೆ. ಈಗಿನ ಪೀಳಿಗೆ ಹಾವುಗಳನ್ನು ಕೇವಲ ಚಿತ್ರಗಳಲ್ಲಿ ನೋಡುವುದರಿಂದ ನಿಜದ ಹಾವನ್ನು ನೋಡಿದೊಡನೆ ವಿಷಕಾರಿ ಎಂದು ಭಾವಿಸುವುದೇ ಹೆಚ್ಚು.

ನೋಡಲು ವಿಷಕಾರಿ ಕಟ್ಟುಹಾವಿನಂತೆಯೇ ಕಾಣಿಸುವ ಹಲವು ಹಾವುಗಳಿವೆ. ಉದಾಹರಣೆಗೆ ಕುಕ್ರಿ, ತೋಳದ ಹಾವು ಮತ್ತು ಆಭರಣದ ಹಾವು. ಆದರೆ ಇವು ವಿಷಕಾರಿಯಲ್ಲ. ಹಾಗೆಯೇ ಮಂಡಲದ ಹಾವಿನಂತೆ ಇರುವ ಮಣ್ಣುಮುಕ್ಕ ಹಾವು ಕೂಡಾ ವಿಷಕಾರಿಯಲ್ಲ. ಅದೇ ರೀತಿ ಇರುವ ಬೆಕ್ಕುಹಾವು ವಿಷಕಾರಿಯಲ್ಲ. ಸಾಮಾನ್ಯವಾಗಿ ಎಲ್ಲೆಡೆ ಕಾಣಸಿಗುವ ಹಸಿರುಹಾವು ವಿಷಕಾರಿಯಲ್ಲ. ಅದು ಬಹುತೇಕರು ಅಂದುಕೊಂಡಂತೆ ಮನುಷ್ಯನ ಕಣ್ಣಿಗೆ ಕುಕ್ಕಿ ದಾಳಿ ಮಾಡುವುದೂ ಇಲ್ಲ.

ಹಾವುಗಳು ಕುರಿತು ಸಾಕಷ್ಟು ಮೂಢನಂಬಿಕೆಗಳಿವೆ. ಅದಕ್ಕೆ ಮುಖ್ಯ ಕಾರಣ ಅವುಗಳ ಬಗ್ಗೆ ನಮಗಿರುವ ಭಯ. ಈ ಭಯವೂ ಅಜ್ಞಾನದಿಂದ ಹುಟ್ಟಿದೆ. ಹಾವುಗಳ ಕುರಿತು ನಾವು ಹೆಚ್ಚು ಹೆಚ್ಚು ಮಾಹಿತಿಗಳನ್ನು ಅರಿತುಕೊಂಡಷ್ಟೂ ಅವುಗಳ ಸಂತತಿ ಉಳಿಯುವ ಸಾಧ್ಯತೆ ಹೆಚ್ಚಾಗುತ್ತದೆ. ಕೇರೆಹಾವು ತನ್ನ ಬಾಲದಲ್ಲಿ ಹೊಡೆಯುತ್ತದೆ ಎಂದು ಈಗಲೂ ನಂಬುವ ರೈತರಿದ್ದಾರೆ. ಆದರೆ ಅವು ರೈತನ ಫಸಲಿಗೆ ಎಷ್ಟು ರೀತಿಗಳಲ್ಲಿ ಉಪಕಾರಿ ಎನ್ನುವ ಮಾಹಿತಿ